**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 249/2017 ಪಿಡಬ್ಲ್ಯೂ-1**

ದಿನಾಂಕಃ05/10/2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಕೆ ವಕೀಲರಿಂದಃ**

ನಾನು ರೈಲ್ವೇ ಇಲಾಖೆಯಿಂದ ಟ್ರೇನ್ ಮ್ಯಾನೇಜರ್ ಆಗಿ ನಿವೃತ್ತಿ ಹೊಂದಿರುತ್ತೇನೆ. ನಾನು ರೈಲ್ವೆ ಇಲಾಖೆಯಲ್ಲಿ ಪಾಯಿಂಟ್ಸ್ ಮೇನ್ ಎಂದು ಸೇವೆಗೆ ಸೇರಿಕೊಂಡಿರುತ್ತೇನೆ. ರೈಲ್ವೇ ಇಲಾಖೆಯಲ್ಲಿ ನನ್ನ ಸೇವಾವಧಿಯಲ್ಲಿ ಇಲಾಖೆಯವರು ನನ್ನ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಿಸಿರುವುದಿಲ್ಲ ರೈಲ್ವೇ ಇಲಾಖೆಯವರು ದಾಖಲಿಸಿರುವ ಕ್ರಿಮಿನಲ್ ಮೊಕದ್ದಮೆಯಲ್ಲಿ ನಾನು ಆರೋಪಿ ಆಗಿರಲಿಲ್ಲ. ಲಕ್ಷ್ಮೀಪತಿ ತಂದೆ ರಾಮಪ್ಪ, ಪಾಯಿಂಟ್ಸ್ ಮೇನ್ ಎಂದರೆ ನಾನೇ ಇರುತ್ತೇನೆ. 1997 ರಲ್ಲಿ ಸಿಸಿ.ನಂ.1260/1997 ರ ಕ್ರಿಮಿನಲ್ ಪ್ರಕರಣದಲ್ಲಿ ನಾನು 3 ನೇ ಆರೋಪಿಯಾಗಿದ್ದೇನು ಎಂದರೆ ಸರಿಯಲ್ಲ. ಸದರಿ ಪ್ರಕರಣವನ್ನು ಯೂನಿಯನ್ ಆಫ್ ಇಂಡಿಯಾ ಪರವಾಗಿ ಸಬ್ ಇನ್ಸಿಸ್ಪೆಕ್ಟರ್ ಆರ್ ಪಿ ಎಫ್ ಅರಸಿಕೆರೆಯವರು ಕಲಂ.3 ರ ಆರ್ ಪಿ ಯು ಪಿ ಕಾಯಿದೆ ಅಡಿಯಲ್ಲಿ ನನ್ನ ಹಾಗೂ ರಾಜ ಮತ್ತು ವಿ.ನಾಗರಾಜರವರ ವಿರುದ್ಧ ದಾಖಲಿಸಿದ್ದರು ಎಂದರೆ ಸರಿಯಲ್ಲ. ನಾವು 3 ಜನರು ಕಾನೂನು ಬಾಹಿರವಾಗಿ ರೈಲ್ವೆ ಆಸ್ತಿಗಳ ಸ್ವಾಧೀನವನ್ನು ಹೊಂದಿದ್ದಕ್ಕಾಗಿ ಸದರಿ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸದರಿ ಪ್ರಕರಣವು ದಿಃ 02.01.2002 ರಂದು ಮುಕ್ತಾಯಗೊಂಡಿರುತ್ತದೆ ಎಂದರೆ ಸರಿಯಲ್ಲ.

ಹಾಸನ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರಲಿಲ್ಲ. ಗೌಸ್ ಶರೀಫ್ ಎನ್ನುವ ವ್ಯಕ್ತಿಯ ಬಗ್ಗೆ ನನಗೆ ಗೊತ್ತಿಲ್ಲ. ನಾನು ಗೌಸ್ ಶರೀಫ್ ರವರ ಕಡೆಯಿಂದ ರೂ.60,000/-ಗಳನ್ನು ಪಡೆದಿದ್ದು ಅದರ ಬಾಬ್ತು ಮರುಪಾವತಿಗಾಗಿ ಒಂದು ಚೆಕ್ ನ್ನು ಆತನಿಗೆ ನೀಡಿದ್ದು, ಸದರಿ ಚೆಕ್ ಬೌನ್ಸ್ ಆಗಿದ್ದಕ್ಕೆ ಆತನು ನನ್ನ ವಿರುಧ್ಧ ಸಿಸಿ ನಂ.14/2006 ನೇದನ್ನು ಸದರಿ ಹಾಸನ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದನು ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾನು ಗೌಸ್ ಶರೀಫ್ ಇತನ ಜೊತೆ ರಾಜೀ ಮಾಡಿಕೊಂಡಿದ್ದರಿಂದ ಪ್ರಕರಣ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿಯಲ್ಲ.

ದಿಃ 26.08.2005 ರಂದು ಹರಿಹರದ ಆರ್ಯಭಟ ವಾರಪತ್ರಿಕೆಯಲ್ಲಿ ನನ್ನ ವಿರುದ್ಧ ಹರಿಹರ ರೈಲ್ವೆ ಇಲಾಖೆಯಲ್ಲಿರುವ ಅಂದರೆ ಲಕ್ಷ್ಮೀಪತಿ ಎಂಬ ಕ್ರಿಮಿನಲ್ ವಂಚಕ ಹರಿಹರ ರೈಲ್ವೇ ಇಲಾಖೆಯಲ್ಲಿ ಇದ್ದು, ಚೆಕ್ ಗಳನ್ನು ನೀಡಿ ಬೌನ್ಸ್ ಮಾಡಿಕೊಂಡು, ಬೌನ್ಸ್ ಆಗಿರುವ ಬಗ್ಗೆ ಪ್ರಕಟಣೆ ಯಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ, ಆ ರೀತಿ

ಯಾವುದೇ ವಾರಪತ್ರಿಕೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಅರಸಿಕೆರೆಯ ರೈಲ್ವೇ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಸದರಿ ಸಮಯದಲ್ಲಿ ಮೇಲೆ ಹೇಳಿದ ಆರ್ಯಭಟ ವಾರ ಪತ್ರಿಕೆಯಲ್ಲಿ ಅರಸಿಕೆರೆಯ ರೈಲ್ವೇಯಲ್ಲಿ ನೌಕರಿ ಮಾಡುತ್ತಿರುವ ಲಕ್ಷ್ಮೀಪತಿ ಎಂಬ ನೌಕರ ಹುಡುಗಿಯೊಬ್ಬಳ ಮಾನಭಂಗಕ್ಕೆ ಕೀಡು ಮಾಡಿದ್ದ ಎಂದು ಹಾಗೂ ರೈಲ್ವೇ ಇಲಾಖೆಗೆ ಸಂಬಂಧಿಸಿದ ಸುಮಾರು 40 ಸ್ಲೀಪರ್ ವುಡ್ ಗಳನ್ನು ಈ ಚೋರರು ಮೂವರು ಚಂಡಾಲ ಶಿಷ್ಯರನ್ನು ಸೇರಿಸಿಕೊಂಡು ಕದ್ದಿದ್ದ ಎಂದು ಪ್ರಕಟಣೆಯಾಗಿತ್ತು ಎಂದರೆ ಸರಿಯಲ್ಲ. ಅದೇ ಪತ್ರಿಕೆಯಲ್ಲಿ ಗೌಸ್ ಶರೀಫ್ ಎನ್ನುವ ವ್ಯಕ್ತಿಯಿಂದ ರೂ.60,000/-ಗಳನ್ನು ಪಡೆದು, ಚೆಕ್ ನೀಡಿದ್ದು, ಅದು ಬೌನ್ಸ್ ಆಗಿರುತ್ತದೆ ಎಂದು ಸಹ ಪ್ರಕಟಣೆ ಆಗಿತ್ತು ಎಂದರೆ ಸರಿಯಲ್ಲ.

ನಾನು ಹರಿಹರದ ರೈಲ್ವೇ ಇಲಾಖೆಯಲ್ಲಿ ಕೆಲಸ ಮಾಡಿರುತ್ತೇನೆ. ಅದೇ ರೀತಿ ಮೇಲೆ ಹೇಳಿದ ಆರ್ಯಭಟ ವಾರಪತ್ರಿಕೆಯಲ್ಲಿ ಅರಸಿಕೆರೆಯ ರೈಲ್ವೇ ಇಲಾಖೆಯಲ್ಲಿ ಪಡಬಾರದ ಪಜೀತಿ ಪಟ್ಟು ಹರಿಹರದ ರೈಲ್ವೇ ಇಲಾಖೆಗೆ ವರ್ಗಾವಣೆಗೊಂಡು ರೈಲ್ವೆ ಟಿಕೇಟ್ ಗಳನ್ನು ನಕಲಿಯಾಗಿ ಮುದ್ರಿಸಿ ಮಾರಾಟ ಮಾಡುವ ಸಾಹಸಕ್ಕೆ ಕೈ ಹಾಕಿರುತ್ತಾನೆ ಎಂದು ಪ್ರಕಟಣೆ ಆಗಿತ್ತು ಎಂದರೆ ಸರಿಯಲ್ಲ. ಸದರಿ ಪ್ರಕಟಣೆಯಲ್ಲಿ ನಕಲಿ ಟಿಕೇಟುಗಳನ್ನು ಹೇಗೆ ತಯಾರಿಸಿಕೊಂಡು ಮಾರಾಟ ಮಾಡುತ್ತಿದ್ದ ಬಗ್ಗೆ ಅಂದರೆ ಅಸಲಿ ಟಿಕೇಟುಗಳ ಕೋಡ್ ನಂಬರ್ ತಿಳಿಸಿಕೊಂಡು ನಕಲಿ ಟಿಕೇಟು ಮುದ್ರಿಸುತ್ತಿದ್ದ ಬಗ್ಗೆ ವರದಿಯಾಗಿತ್ತು ಎಂದರೆ ಸರಿಯಲ್ಲ. ಅದೇ ಪತ್ರಿಕಾ ಪ್ರಕಟಣೆಯಲ್ಲಿ ಗೌಸ್ ಶರೀಫ್, ಹರಿಹರದ ಹನುಮಂತನಾಯ್ಕ, ಹರಿಹರದ ಸಿ.ಎನ್.ಅಣ್ಣಪ್ಪ, ಹರಿಹರದ ಕೆ.ಆರ್. ಪ್ರಸನ್ನರವರಿಗೆ ನೀಡಿದ ಚೆಕ್ ಬೌನ್ಸ್ ಆಗಿರುವ ಬಗ್ಗೆಯು ಸಹ ವಿವರಣೆ ಆಗಿತ್ತು ಎಂದರೆ ಸರಿಯಲ್ಲ.

ಸದರಿ ಆರ್ಯಭಟ ವಾರಪತ್ರಿಕೆಯ ಸಂಪಾದಕರಾಗಿ ವಿ.ವಾಸುದೇವ ಎನ್ನುವವರು ಹಾಗೂ ಸಹಸಂಪಾದಕರಾಗಿ ಹೊನ್ನೇಶಿ ಗೊಲ್ಲರ್ ರವರು ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆರ್ಯಭಟ ವಾರಪತ್ರಿಕೆಯ ಸಂಪಾದಕರಾದ ವಿ.ವಾಸುದೇವ ಹಾಗೂ ಸಹಸಂಪಾದಕರಾದ ಹೊನ್ನೇಶಿ ಗೊಲ್ಲರ್ ರವರ ವಿರುದ್ಧ ನಾನು ಯಾವುದೇ ಮಾನಹಾನಿ ಪ್ರಕರಣ ದಾಖಲಿಸಿರುವುದಿಲ್ಲ. ಸದರಿ ಪತ್ರಿಕೆಯಲ್ಲಿ ನನ್ನ ವಿರುದ್ಧ ಪ್ರಕಟಣೆಗೊಂಡ ವರದಿ ಸತ್ಯದಿಂದ ಕೂಡಿದ್ದರಿಂದ ನಾನು ಸದರಿಯವರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಿಃ 16.09.2005 ರಂದು ಸದರಿ ಮೇಲೆ ಹೇಳಿದ ಆರ್ಯಭಟ ವಾರಪತ್ರಿಕೆಯಲ್ಲಿ ರೈಲ್ವೇ ಇಲಾಖೆಯ ನೌಕರ ಲಕ್ಷ್ಮೀಪತಿ ಎಂಬ ಆಕೋಪತಿ ಎಂಬ ಶೀರ್ಷಿಕೆಯೊಂದಿಗೆ ನನ್ನ ಫೋಟೋ ಸಹಿತ ಪ್ರಕಟಣೆಯಾಗಿತ್ತು ಎಂದರೆ ಸರಿಯಲ್ಲ. ಸದರಿ ವಾರಪತ್ರಿಕೆಯಲ್ಲಿ ನನ್ನ ಚರಿತ್ರೆ ಬಗ್ಗೆ ಸಂಪೂರ್ಣವಾಗಿ ಜಾಲಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾರಪತ್ರಿಕೆಯಲ್ಲಿ

ಪ್ರಕಟಣೆಯಾದ ವರದಿಯಿಂದ ನನ್ನ ತೇಜೋವಧೆಯಾದ ಬಗ್ಗೆ ಸದರಿ ವರದಿಯನ್ನು ಮಾಡಿರುವವರ ವಿರುದ್ದ ನಾನು ಯಾವುದೇ ಮಾನಹಾನಿ ಮೊಕದ್ದಮೆಗಳನ್ನು ದಾಖಲಿಸಿರುವುದಿಲ್ಲ. ದಿಃ16.09.2005 ರಂದು ಸದರಿ ಆರ್ಯಭಟ ವಾರಪತ್ರಿಕೆಯಲ್ಲಿ ನನ್ನ ವಿರುದ್ಧ ಪ್ರಕಟಣೆಯಾದ ವಿಷಯವೂ ಸತ್ಯದಿಂದ ಕೂಡಿದ್ದರಿಂದ ನಾನು ಸದರಿ ಸಂಪಾದಕ ಮತ್ತು ಸಹಸಂಪಾದಕರ ವಿರುದ್ದ ಯಾವುದೇ ಮಾನಹಾನಿ ಮೊಕದ್ದಮೆಗಳನ್ನು ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರಸ್ತುತ ಪ್ರಕರಣದ 4 ನೇ ಆರೋಪಿ ಸಿ.ಎನ್.ಅಣ್ಣಪ್ಪ ನನಗೆ ಗೊತ್ತು. ನಾನು ಸದರಿ 4 ನೇ ಆರೋಪಿಯಿಂದ ಯಾವುದೇ ಸಾಲ ಪಡೆದಿರುವುದಿಲ್ಲ. ಸದರಿ 4 ನೇ ಆರೋಪಿ ನನ್ನ ವಿರುದ್ದ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿರುತ್ತಾನೆ. ನಾನು ಸದರಿ 4 ನೇ ಆರೋಪಿಯಿಂದ ರೂ.60,000/–ಗಳನ್ನು ಪಡೆದುಕೊಂಡು ಅದರ ಬಾಬ್ತು ಚೆಕ್ ನ್ನು ಕೊಟ್ಟಿದ್ದು, ಅದು ಬೌನ್ಸ ಆಗಿದ್ದರಿಂದ ಆತ ನನ್ನ ವಿರುದ್ದ ಸಿಸಿ ನಂ.828/2005 ನೇದನ್ನು ದಾಖಲು ಮಾಡಿದ್ದ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು 4 ನೇ ಆರೋಪಿಗೆ ರೂ.1,20,000/–ಗಳನ್ನು ಕೊಡಬೇಕೆಂದು ನ್ಯಾಯಾಲಯ ತೀರ್ಪು ನೀಡಿರುತ್ತದೆ ಎಂದರೆ ಸರಿ. ಸದರಿ ತೀರ್ಪಿನ ವಿರುದ್ದ ನಾನು ಕ್ರಿ.ಅಪೀಲು ಸಂ.80/2015 ನ್ನು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ದಾಖಲಿಸಿದ್ದೆ ಎಂದರೆ ಸರಿ. ಸದರಿ ಕ್ರಿ.ಅಪೀಲು ಸಂ.80/2015 ನೇದು ವಜಾಗೊಂಡು ಸಿಸಿ ನಂ.828/2005 ರಲ್ಲಿ ಮಾಡಿದ ಆದೇಶವನ್ನು ಎತ್ತಿ ಹಿಡಿದಿರುತ್ತಾರೆ ಎಂದರೆ ಸರಿ.

ಈ ಪ್ರಕರಣದ 6 ನೇ ಆರೋಪಿ ಟಿ.ಆರ್. ಪ್ರಸನ್ನ ನನಗೆ ಗೊತ್ತಿಲ್ಲ. ಅವರಿಂದ ನಾನು ಹಣ ಪಡೆದಿರುವುದಿಲ್ಲ. ಅವರು ನನ್ನ ವಿರುದ್ದ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಪ್ರಕರಣದ ಸಿಸಿ ನಂ.874/2005 ಎಂದು ಇರುತ್ತದೆ ಎಂದರೆ ಸರಿ. ಸದರಿ 6 ನೇ ಆರೋಪಿಯಿಂದ ರೂ.25,000/–ಗಳನ್ನು ಪಡೆದು ಅದರ ಬಾಬ್ತು ಚೆಕನ್ನು ಕೊಟ್ಟಿದ್ದರಿಂದ ಅದು ಬೌನ್ಸ ಆಗಿದ್ದರಿಂದ ಸದರಿ ಪ್ರಕರಣ ದಾಖಲಿಸಿರುತ್ತದೆ ಎಂದರೆ ಸರಿಯಲ್ಲ. ದಿಃ 26.09.2015 ರಂದು ಸದರಿ ಪ್ರಕರಣದಲ್ಲಿ ನಾನು 6 ನೇ ಆರೋಪಿಗೆ ರೂ.50,000/–ಗಳನ್ನು ನೀಡಬೇಕೆಂದು ನ್ಯಾಯಾಲಯ ತೀರ್ಪು ನೀಡಿರುತ್ತದೆ ಎಂದರೆ ಸರಿ. ಸದರಿ ತೀರ್ಪಿನ ವಿರುದ್ದ ನಾನು ಕ್ರಿ.ಅಪೀಲು ಸಂ.113/2015 ನ್ನು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ದಾಖಲಿಸಿದ್ದೆ ಎಂದರೆ ಸರಿ. ಸದರಿ ಕ್ರಿ.ಅಪೀಲು ಸಂ.113/2015 ನೇದು ವಜಾಗೊಂಡು ಸಿಸಿ ನಂ.874/2005 ರಲ್ಲಿ ಮಾಡಿದ ಆದೇಶವನ್ನು ಎತ್ತಿ ಹಿಡಿದಿರುತ್ತಾರೆ ಎಂದರೆ ಸರಿ.

ಈ ಪ್ರಕರಣದ 5 ನೇ ಆರೋಪಿ ಹನುಮಂತನಾಯ್ಕ ನನಗೆ ಗೊತ್ತಿಲ್ಲ. ಆತನನ್ನು ನಾನು ಚೆಕ್ ಬೌನ್ಸ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಬರುತ್ತಿದ್ದಾಗ ನೋಡಿರುತ್ತೇನೆ.

ಆತನಿಂದ ನಾನು ರೂ. 65,000/-ಪಡೆದುಕೊಂಡು ಅದರ ಬಾಬ್ತು ಚೆಕ್ ನ್ನು ನೀಡಿದ್ದು, ಅದು ಬೌನ್ಸ ಆಗಿದ್ದರಿಂದ ಸಿಸಿ ನಂ.911/2005 ನೇದರ ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿಯು ಪ್ರಕರಣ ದಾಖಲಾಗಿತ್ತು ಎಂದರೆ ಸರಿ ಆದರೆ ನಾನು ಅವರಿಂದ ಯಾವುದೇ ದುಡ್ಡು ಪಡೆದಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾನು 5 ನೇ ಆರೋಪಿಗೆ ರೂ.1,30,000/-ಗಳನ್ನು ನೀಡಬೇಕೆಂದು ನ್ಯಾಯಾಲಯ ತೀರ್ಪು ನೀಡಿರುತ್ತದೆ ಎಂದರೆ ಸರಿ. ಸದರಿ ತೀರ್ಪಿನ ವಿರುದ್ದ ನಾನು ಕ್ರಿ.ಅಪೀಲು ಸಂ.79/2015 ನೇದನ್ನು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ 5 ನೇ ಆರೋಪಿಯ ವಾರಸುದಾರರ ವಿರುದ್ದ ದಾಖಲಿಸಿದ್ದೆ ಎಂದರೆ ಸರಿ. ದಿಃ 25.10.2019 ರಂದು ಸದರಿ ಕ್ರಿ.ಅಪೀಲು ಸಂ.79/2015 ನೇದು ವಜಾಗೊಂಡು ಸಿಸಿ ನಂ.911/2005 ರಲ್ಲಿ ಮಾಡಿದ ಆದೇಶವನ್ನು ಎತ್ತಿ ಹಿಡಿದಿರುತ್ತಾರೆ ಎಂದರೆ ಸರಿ.

ಈ ಮೇಲೆ ಹೇಳಿದಂತೆ ನಾನು ಆರೋಪಿತರ ವಿರುದ್ದ ದ್ವೇಷವನ್ನು ಇಟ್ಟುಕೊಂಡು ಅವರನ್ನು ಇನ್ನು ಸತಾಯಿಸಬೇಕು ಹಾಗೂ ತೊಂದರೆ ಕೊಡಬೇಕೆಂಬ ಏಕಮೇವ ಉದ್ದೇಶದಿಂದ ಸಿಸಿ ನಂ.1250/2009 ನೇದನ್ನು ಹಾಗೂ ಪ್ರಸ್ತುತ ಪ್ರಕರಣವನ್ನು 3 ಜನ ಆರೋಪಿತರ ವಿರುದ್ದ ಕಲಂ.504, 506 ದಂಡ ಪ್ರಕ್ರಿಯೆ ಸಂಹಿತೆ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ಸಿಸಿ ನಂ.1250/2009 ನೇದರಲ್ಲಿ ದಿನಾಂಕಃ 05.07.2015 ರಂದು ಆರೋಪಿತರು ನಿರ್ದೋಷಿಗಳೆಂದು ತೀರ್ಪನ್ನು ನೀಡಿ, ಪ್ರಕರಣ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ.

ಭದ್ರಾವತಿಯ ನ್ಯಾಯಾಲಯದಲ್ಲಿ 1 ನೇ ಆರೋಪಿ ಮಂಜುನಾಥನ ಚಿಕ್ಕಮ್ಮನ ಮಗ ಗೋಪಾಲಕೃಷ್ಣರಾಜ ನನ್ನ ವಿರುದ್ದ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದನು. ಸದರಿ ಗೋಪಾಲಕೃಷ್ಣರಾಜನಿಗೂ ಹಾಗೂ 1 ನೇ ಆರೋಪಿಗೂ ನಾನು ಹೇಳಿದಂತೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಗೋಪಾಲಕೃಷ್ಣರಾಜರವರಿಂದ ನಾನು ರೂ.1,10,000/-ಗಳನ್ನು ಪಡೆದುಕೊಂಡು ಅದರ ಬಾಬತ್ತು ಒಂದು ಚೆಕ್ ನ್ನು ಕೊಟ್ಟಿದ್ದು, ಸದರಿ ಚೆಕ್ ಬೌನ್ಸ್ ಆಗಿದ್ದರಿಂದ ಆತ ನನ್ನ ವಿರುದ್ದ ಭದ್ರಾವತಿ ನ್ಯಾಯಾಲಯದಲ್ಲಿ ಸಿಸಿ 201/2010 ನೇದನ್ನು ದಾಖಲಿಸಿದ್ದ ಎಂದರೆ ಸರಿ. ಸದರಿ ಪ್ರಕರಣದಲ್ಲಿ ದಿಃ 01.08.2017 ರಂದು ರೂ.1,60,000/-ಗಳನ್ನು ಆತನಿಗೆ ಕೊಡಬೇಕೆಂದು ನನ್ನ ವಿರುದ್ದ ನ್ಯಾಯಾಲಯ ತೀರ್ಪು ನೀಡಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಸದರಿ ಪ್ರಕರಣದ ನಕಲನ್ನು ನಾನು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಪ್ರಕರಣ ಇನ್ನು ಚಾಲ್ತಿಯಲ್ಲಿರುತ್ತದೆ.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಿದ್ದು, ಮಂಜೂರು ಮಾಡಿ ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.